**ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿಯವರ ನ್ಯಾಯಾಲಯ ಪೊನ್ನಂಪೇಟೆ.**

**ಕ್ರಿ.ಮೊ.ಸಂಖ್ಯೆ:1400/2024**

ಪಿರ್ಯಾದಿ : ಶ್ರೀ ಪುಟ್ಟರಾಜು ಎನ್.ಟಿ,
ತಂದೆಃ ಪೌತಿ ತಿಮ್ಮಯ್ಯ,
ಪ್ರಾಯ 56 ವರ್ಷ
ವಾಸಃ ಧನುಗಾಲ ಗ್ರಾಮ ಮತ್ತು ಅಂಚೆ,
ಗೋಣಿಕೊಪ್ಪ ಟೌನ್,
ಪೊನ್ನಂಪೇಟೆ ತಾಲ್ಲೂಕು, ಕೊಡಗು.

**ವಿರುದ್ಧ**

ಆರೋಪಿ : ಶ್ರೀ ದಿವಾಕರ,
ತಂದೆಃ ಮರಿಯಯ್ಯ,
ಪ್ರಾಯಃ 38 ವರ್ಷ,
ವಾಸಃ ದೊಡ್ಡಹೆಜ್ಜೇರು ಗ್ರಾಮ ಮತ್ತು ಅಂಚೆ,
ಹನಗೋಡು ಹೋಬಳಿ, ಹುಣಸೂರು ತಾಲ್ಲೂಕು,
ಮೈಸೂರು ಜಿಲ್ಲೆ.

**ದಂಡ ಸಂಹಿತೆ ಪ್ರಕ್ರಿಯೆ ಕಲಂ 313 ರಡಿಯಲ್ಲಿ ಆರೋಪಿಯ ಹೇಳಿಕೆ**

ಪ್ರಶ್ನೆ ಸಂಖ್ಯೆ-1: ಪಿರ್ಯಾದಿಯ ಪರ ಇದುವರೆಗೂ ನುಡಿದ ಎಲ್ಲಾ ಸಾಕ್ಷ್ಯಗಳನ್ನು ಆಲಿಸಿದ್ದೀರಾ?

ಉಃ ಅರ್ಥವಾಯಿತು.

ಪ್ರಶ್ನೆ ಸಂಖ್ಯೆ-2: ಪ್ರಾ.ಸಾಃ1 ರ ಶ್ರೀ ಪುಟ್ಟರಾಜು ಎನ್.ಟಿ, ಪಿರ್ಯಾದುದಾರರು, ಇವರು ತಮ್ಮ ಸಾಕ್ಷ್ಯದಲ್ಲಿ ನುಡಿಯುತ್ತಾ, ಆರೋಪಿಯಾದ ನೀವು ಪರಿಚಯಸ್ಥರಾಗಿದ್ದು, ತಮ್ಮ ಆರ್ಥಿಕ ಅಗತ್ಯತೆಗಾಗಿ ಅವರ ಬಳಿ 2023ರ ಜನವರಿ ಮೊದಲನೆ ವಾರದಲ್ಲಿ ರೂ.12,00,000/- ರೂಪಾಯಿಗಳನ್ನು ಸಾಲವಾಗಿ ಪಡೆದಿದ್ದು, ನಂತರದ ದಿನಗಳಲ್ಲಿ ರೂ.4,00,000/- ಮತ್ತು ರೂ.2,00,000/- ನಗದನ್ನು ವಿವಿಧ ದಿನಾಂಕಗಳಂದು ಪಿರ್ಯಾದಿಯವರಿಗೆ ವಾಪಸ್ಸು ನೀಡಿರುತ್ತೀರಿ, ಉಳಿದ ರೂ.6,00,000/- ಹಣವನ್ನು ಪಿರ್ಯಾದಿಯವರು ಮರುಪಾವತಿಸುವಂತೆ ಕೇಳಿದಾಗ, ದಿಃ23.02.2024 ರಂದು ಒಪ್ಪಂದವನ್ನು ಮಾಡಿಕೊಂಡಿದ್ದು, ಅದರಂತೆ ಆರೋಪಿಯಾದ ನೀವು ರೂ.3,00,000/- ರೂಪಾಯಿಯ ದಿಃ30.07.2024 ರ ಕರ್ನಾಟಕ ಬ್ಯಾಂಕ್, ಹೆಚ್.ಡಿ.ಕೋಟೆ ಶಾಖೆಯ ನಿಮ್ಮ ಖಾತೆಯ 917884 ನಂಬರಿನ ಚೆಕ್ ಅನ್ನು ಉಳಿದ ಹಣದ ಸಾಲದ ಭಾದ್ಯತೆಗಾಗಿ ನೀಡಿದ್ದು, ನಂತರ ಪಿರ್ಯಾದಿಯವರು ಸದರಿ ಚೆಕ್ ಅನ್ನು ನಗದೀಕರಣಕ್ಕಾಗಿ ತಮ್ಮ ಬ್ಯಾಂಕ್ ಆದ ಬ್ಯಾಂಕ್ ಆಫ್ ಬರೋಡ, ಗೋಣಿಕೊಪ್ಪ ಶಾಖೆಗೆ ಹಾಜರು ಪಡಿಸಿದಾಗ ಅವರು ದಿಃ02.08.2024 ರಂದು "Refer to drawer" ಎಂದು ಹಿಂಬರಹವನ್ನು ನೀಡಿರುತ್ತಾರೆ. ದಿಃ02.09.2024 ರಂದು 15 ದಿನಗಳೊಳಗೆ ಚೆಕ್ ನ ಹಣವನ್ನು ಹಿಂತಿರುಗಿಸುವಂತೆ ಕಾನೂನು ರೀತಿಯಲ್ಲಿ ನೋಟೀಸನ್ನು ನೀಡಿದ್ದರೂ ಸಹ ಆರೋಪಿಯಾದ ನೀವು ಎರಡನೇ ಚೆಕ್‌ನ ಹಣವನ್ನು ಹಿಂದಿರುಗಿಸದೇ ಇರುವ ಕಾರಣ ಅವರು ನಿಮ್ಮ ವಿರುದ್ಧ ದೂರನ್ನು ನೀಡಿ ಸೂಕ್ತ ಕಾನೂನು ಕ್ರಮ ಜರುಗಿಸಬೇಕೆಂದು ಮತ್ತು ಸಾಕ್ಷಿಯು ನಿ.ಪಿ.1 ಚೆಕ್ಕನ್ನು,

Divakara

ನಿ.ಪಿ.2 ಬ್ಯಾಂಕ್ ಹಿಂಬರಹವನ್ನು, ನಿ.ಪಿ.3 ವಕೀಲರ ಮೂಲಕ ನೀಡಿದ ನೋಟೀಸನ್ನು, ನಿ.ಪಿ.4 ಅಂಚೆ ರಶೀದಿಯನ್ನು, ನಿ.ಪಿ.5 ಅಂಚೆ ಕವರನ್ನು ಗುರುತಿಸಿ ಸಾಕ್ಷ್ಯವನ್ನು ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರಃ ಓದಿ ಹೇಳಲಾಯಿತು. ಸುಳ್ಳು

**ಪ್ರಶ್ನೆ ಸಂಖ್ಯೆ-3:** ಈ ಪ್ರಕರಣದಲ್ಲಿ ನಿಮ್ಮ ಪರವಾಗಿ ಸಾಕ್ಷ್ಯ ವಿಚಾರಣೆ ಅಥವಾ ದಾಖಲಾತಿ ಹಾಜರುಪಡಿಸಲು ಬಯಸುವಿರಾ?

ಉತ್ತರಃ ಇಲ್ಲ.

**ಪ್ರಶ್ನೆ ಸಂಖ್ಯೆ-4** ಈ ಪ್ರಕರಣದಲ್ಲಿ ನೀವೇನಾದರೂ ಹೇಳಬಯಸುವಿರಾ?

ಉತ್ತರಃ [illegible]

(ತೆರೆದ ನ್ಯಾಯಾಲಯದಲ್ಲಿ ಮೇಲಿನ ಪ್ರಶ್ನೆಗಳನ್ನು ಆರೋಪಿಗೆ ಓದಿ ವಿವರಿಸಿದ ನಂತರ ಆರೋಪಿಯು ನೀಡಿದ ಉತ್ತರಗಳನ್ನು ದಿಃ29.05.2026 ರಂದು ನನ್ನಿಂದ ದಾಖಲು ಮಾಡಿಕೊಳ್ಳಲಾಯಿತು)

29.5.26.

ಸ್ಥಳಃ ಪೊನ್ನಂಪೇಟೆ,
ದಿನಾಂಕಃ 29.05.2026

ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,
ಪೊನ್ನಂಪೇಟೆ.

Divakaran